- ಮಿದುಳಿಗೆ ಕೀವು ತುಂಬಿಕೊಳ್ಳುವಿಕೆಯು ಈ ಕೆಳಕಂಡ ಕಾರಣದಿಂದ ಆಗಬಹುದು–ತಲೆನೋವು, ವಾಂತಿ, ತಲೆ ಸುತ್ತುವಿಕೆ, ಗೊಂದಲ, ಕಿವಿ ಕೇಳದಿರುವಿಕೆ, ಅರೆ ಮೊಬ್ಬು ಅಥವಾ ಪಾರ್ಶ್ವವಾಯು
- ಮುಖದ ಒಂದು ಭಾಗದ ಸೀಮಿತ ಅಥವಾ ನಿರ್ಬಂಧಿತ ಚಲನೆ (ಮುಖದ ಪಾರ್ಶ್ವ ವಾಯು)
- ದ್ವಿ ನೋಟ
- ಮಾತನಾಡುವ ಮತ್ತು ಕೇಳುವ ಸಮಸ್ಯೆ

### ಮಾಡಬೇಕಾದವುಗಳು

- ಮೇಲ್ಭಾಗದ ಶ್ವಾಸ ನಳಿಕೆಯಲ್ಲಿ ಸೋಂಕು ಕಂಡ ತಕ್ಷಣ ವೈದ್ಯರನ್ನು ಸಂಪರ್ಕಿಸಿ
- ಒರಸಿಕೊಳ್ಳಲು ಸ್ವಚ್ಛವಾದ ಟವಲ್ ಗಳನ್ನು ಬಳಸಿ




### ಮಾಡಬಾರದವುಗಳು

- ಕಿವಿಯೊಳಗೆ ಏನನ್ನು ಹಾಕಿಕೊಳ್ಳಬೇಡಿ
- ಮೊನಚಾದ ಹೇರ್ ಪಿನ್ನು, ಹಲ್ಲು ಕಡ್ಡಿ ಅಥವಾ ಚೂಪಾದ ವಸ್ತುಗಳಿಂದ ಕಿವಿ ಸ್ವಚ್ಛ ಮಾಡಿಕೊಳ್ಳಲು ಪ್ರಯತ್ನಿಸಬೇಡಿ
- ಕಿವಿಯೊಳಗೆ ನೀರು ಹೋಗದಂತೆ ನೋಡಿಕೊಳ್ಳಿ
- ವೈದ್ಯರ ಸಲಹೆಯಿಲ್ಲದೆ ಕಿವಿಯೊಳಗೆ ಹತ್ತಿಯನ್ನು ಹಾಗೇ ಬಿಡಬೇಡಿ.
- ಕಿವಿ ಕೆರೆದುಕೊಳ್ಳುವುದು ಮತ್ತು ಮೊನಚಾದ ವಸ್ತುಗಳಾದ ಪೆನ್ಸಿಲ್, ಹೇರ್‌ಪಿನ್ನು, ಬೆಂಕಿ ಕಡ್ಡಿಯನ್ನು ಕಿವಿಯೊಳಗೆ ಚುಚ್ಚಿ ಕೊಳ್ಳಬೇಡಿ




- ಎಣ್ಣೆ ಅಥವಾ ದ್ರವ ಪದಾರ್ಥಗಳನ್ನು ಕಿವಿಯೊಳಗೆ ಸುರಿದುಕೊಳ್ಳುವುದನ್ನು ವಿರೋಧಿಸಿ




- ಕಿವಿಯೊಳಗಿನಿಂದ ಯಾವುದೇ ರೀತಿಯ ದ್ರವ ಪದಾರ್ಥ ಹೊರ ಬರುವಿಕೆ ಅಥವಾ ಕಿವಿ ಸೋರುವಿಕೆ ಇದ್ದಲ್ಲಿ ನಿರ್ಲಕ್ಷಿಸಬೇಡಿ.





**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**
ನೈಮಿಷಂ ಕ್ಯಾಂಪಸ್, ಮಾನಸಗಂಗೋತ್ರಿ,
ಮೈಸೂರು 570 006
ದೂರವಾಣಿ: 0821–2502000, ಟೋಲ್ ಫ್ರೀ: 18004255218
ಕೆಲಸದ ವೇಳೆ: ಸೋಮವಾರದಿಂದ ಶುಕ್ರವಾರ (9AM–5.30PM)
ವೆಬ್‌ಸೈಟ್: www.aiishmysore.in
ಕೇಂದ್ರ ಸರ್ಕಾರದ ರಜಾದಿನಗಳನ್ನು ಹೊರತು ಪಡಿಸಿ

ಇ ಮೇಲ್: director@aiishmysore.in


# ಕಿವಿ ಸೋರುವಿಕೆ ಮತ್ತು ಅದರ ತಡೆಗಟ್ಟುವಿಕೆ



## ಸಂವಹನ ನ್ಯೂನತೆ ತಡೆಗಟ್ಟುವಿಕೆಯ ವಿಭಾಗ


**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**
ಮಾನಸಗಂಗೋತ್ರಿ, ಮೈಸೂರು 570 006
ದೂರವಾಣಿ: 0821–2502000, ಫ್ಯಾಕ್ಸ್: 0821–2510515
ಇ ಮೇಲ್: director@aiishmysore.in

www.aiishmysore.in

## ಕಿವಿ ಸೋರುವಿಕೆ ಎಂದರೇನು?

- ಯಾವುದೇ ರೀತಿಯ ರಕ್ತ, ಕೀವು ಅಥವಾ ದ್ರವ್ಯ ಕಿವಿಯಿಂದ ಬರುವುದಕ್ಕೆ ಸೋರುವಿಕೆ ಎನ್ನುತ್ತಾರೆ.
- ಕಿವಿ ಸೋರುವಿಕೆಯಿದ್ದಲ್ಲಿ ರೋಗಿಗೆ ದೀರ್ಘಾವಧಿಯ ಕ್ರಮಬದ್ಧವಾದ ಚಿಕಿತ್ಸೆಯ ಅವಶ್ಯಕತೆಯಿರುತ್ತದೆ.




## ಕಿವಿ ಸೋರುವಿಕೆಯ ಕಾರಣಗಳು ಯಾವುವು?

- ಮಧ್ಯದ ಅಥವಾ ಹೊರ ಕಿವಿಯ ಸೋಂಕು
- ಪುನಾವೃತ್ತಿ ಹಿನ್ನಲೆ ಹೊಂದಿದ ಗಂಟಲು ಮತ್ತು ಮೂಗಿನ ಸೋಂಕು
- ಅಶುದ್ಧ ನೀರಿನಲ್ಲಿ ಈಜುವುದು




- ವಿಮಾನ ಪ್ರಯಾಣ ಮತ್ತು ಡೈವಿಂಗ್ (ಹಾರಾಡುವಿಕೆ)
- ಕಿವಿ ಅಥವಾ ಕೆನ್ನೆಯ ಮೇಲೆ ಬಡಿತ
- ಕಿವಿಯೊಳಗೆ ಚೂಪಾದ ಮೊನೆಚಾದ ತುದಿಯಿರುವ ಅಥವಾ ರಬ್ಬರ್, ಅಕ್ಕಿ, ಕಲ್ಲುಗಳು ಮುಂತಾದವನ್ನು ಕಿವಿಯ ನಾಲೆಯೊಳಗೆ ಹಾಕಿಕೊಳ್ಳುವುದು ಅಥವಾ ಬಳಸುವುದು
- ತಲೆಗೆ ಅಥಾವ ಮಿದುಳಿಗೆ ಪೆಟ್ಟು




- ತುಟಿ ಸೀಳುವಿಕೆಯಿರುವುದು (ಸರಿಪಡಿಸಿದ/ ಸರಿಪಡಿಸದ)




## ನಾನು ವೈದ್ಯರನ್ನು ಯಾವಾಗ ಸಂಪರ್ಕಿಸಬೇಕು?

ಈ ಕೆಳಕಂಡ ಲಕ್ಷಣಗಳು ಕಂಡಲ್ಲಿ ತಕ್ಷಣ ಕಿವಿ, ಮೂಗು, ಗಂಟಲು ಅಥವಾ ಶ್ರವಣ ತಜ್ಞರನ್ನು ಭೇಟಿ ಮಾಡುವುದು

- ಕಿವಿ ಸೋರುವಿಕೆ (ನೋವಿರುವಾಗ, ನೋವಿಲ್ಲದೆ ಇರುವಾಗ)
- ತೀವ್ರವಾದ ಕಿವಿ ನೋವು
- ಕಿವಿಯಿಂದ ಕೆಟ್ಟವಾಸನೆ
- ಬೇರೆ ಲಕ್ಷಣಗಳಾದ ಜ್ವರ, ತಲೆನೋವು, ತಲೆಸುತ್ತುವಿಕೆ ಅಥವಾ ಮೂಗಿನ ತೊಂದರೆಯಿಂದ ಕಿವಿ ಸೋರುವಿಕೆಯ ಲಕ್ಷಣಗಳು ಕಂಡು ಬಂದಲ್ಲಿ
- ಕಿವಿಯಲ್ಲಿ ಕೆರೆತ ಮತ್ತು ಮುಜುಗರ (ಅಸಮಾಧಾನ)
- ಕಿವಿ ಕಟ್ಟುವಿಕೆ
- ಕಿವಿ ಕೇಳದಿರುವಿಕೆ
- ಬೇರೆಯವರು ಮಾತನಾಡುವುದನ್ನು ಅರ್ಥ ಮಾಡಿಕೊಳ್ಳುವ ತೊಂದರೆ
- ಆಹಾರವನ್ನು ಕಚ್ಚಿ ತಿನ್ನುವಾಗ ಆಗುವ ನೋವು ಮತ್ತು ಮುಜುಗರ

## ಕಿವಿ ಸೋರುವಿಕೆಗೆ ಚಿಕಿತ್ಸೆ ಹೇಗೆ?

- ತಜ್ಞರು ಹೇಳಿದ ಔಷದೋಪಾಚಾರಗಳನ್ನು ತೆಗೆದುಕೊಳ್ಳಬೇಕು
- ವೈದ್ಯರ ಸಲಹೆಯ ಪ್ರಕಾರ ಕಿವಿಯ ಸ್ವಚ್ಛತೆಯನ್ನು ಕಾಪಾಡಿಕೊಳ್ಳಿ
- ಈ ಕೆಳಗೆ ಕೊಟ್ಟಿರುವ ಸಂದರ್ಭಗಳಲ್ಲಿ ಕಿವಿ, ಮೂಗು, ಗಂಟಲಿನ ವೈದ್ಯರು ಕಿವಿಯ ಶಸ್ತ್ರ ಚಿಕಿತ್ಸೆಗೆ ಸೂಚಿಸುವರು:
    1. ತುರ್ತು ಪರಿಸ್ಥಿತಿಯಲ್ಲಿ
    2. ಪುನಾರ್ವತನೆಯ ಹಿನ್ನೆಲೆಯಲ್ಲಿ ಕಿವಿ ಸೋರುವಿಕೆ ಇದ್ದಾಗ
- ಸರಿಯಾಗಿ ಕೇಳಿಸಿಕೊಳ್ಳುವ ತೊಂದರೆ ಇದ್ದಾಗ(ಕೇಳಿಸಿಕೊಳ್ಳುವಿಕೆ ಕ್ಷೀಣವಾದಾಗ)




## ಕಿವಿ ಸೋರುವಿಕೆಯನ್ನು ತಡೆಗಟ್ಟುವುದು ಹೇಗೆ?

- ಕಿವಿಗಳನ್ನು ಒಣ ಹಾಗೂ ಸ್ವಚ್ಛವಾಗಿ ಇಟ್ಟುಕೊಳ್ಳಿ
- ಸ್ನಾನ ಮಾಡುವಾಗ ವ್ಯಾಸಲೀನ್ ಲೇಪಿತ ಹತ್ತಿಯನ್ನು ಕಿವಿಯಲ್ಲಿಟ್ಟುಕೊಳ್ಳಿ
- ಈಜುವಾಗ, ಈಜುಗರು ಬಳಸುವ ಕಿವಿಯ ಪ್ಲಗ್ ಗಳನ್ನು ಬಳಸಿ




## ಕಿವಿ ಸೋರುವಿಕೆಯ ಸಮಸ್ಯೆಗೆ ಚಿಕಿತ್ಸೆ ಪಡೆಯದಿದ್ದಾಗ ಆಗುವ ತೀವ್ರ ಪರಿಣಾಮಗಳು

- ಕಿವಿ ಸೋರುವಿಕೆಯ ಸಮಸ್ಯೆ ಇರುವಾಗ ಕಿವಿ, ಗಂಟಲು, ಮೂಗು ತಜ್ಞರಿಂದ ಚಿಕಿತ್ಸೆ ಪಡೆಯದಿದ್ದಲ್ಲಿ ಇದರ ತೀವ್ರತೆಯನ್ನು ಮುಂದಿನ ಹಂತಗಳಲ್ಲಿ ಕಾಣಬಹುದು
- ಕಿವಿ ತಮಟೆಯಲ್ಲಿ ರಂಧ್ರ ಅಥವಾ ಪದರು ಹರಿಯುವಿಕೆ
- ಕಿವಿ ಹಿಂದೆ ಕೀವು ತುಂಬಿಕೊಳ್ಳುವಿಕೆ ಕಿವಿ ಹಿಂಬಾಗದಲ್ಲಿ ನೋವು ಮತ್ತು ಊತು ಕೊಳ್ಳುವಿಕೆ
- ಕಿವಿಯೊಳಗೆ ಸಮತೋಲನ ಕಾಪಾಡುವ ಅಂಗದ ಸೋಂಕುವಿನ ಪರಿಣಾಮ ವಾಕರಿಕೆ, ವಾಂತಿ, ತಲೆ ಸುತ್ತುವಿಕೆ ಮತ್ತು ಕಿವಿ ಕೇಳದಿರುವಿಕೆ
- ವೈರಲ್ ಸೋಂಕು: ಇದು ಮಿದುಳಿಗೆ ಅಪಾಯ ಉಂಟು ಮಾಡುವ ವೈರಲ್ ಸೋಂಕು (ಮಿದುಳು ಜ್ವರ)